

ಚಿತ್ರಗಳು: ಸೃಜನ್

ಫ್ಲೋರಿಡಾಗೆ ಹೋಗಲು ಅಜ್ಜಿಗೆ ಎಳ್ಳಷ್ಟೂ ಮನಸ್ಸಿರಲಿಲ್ಲ. ಬದಲಾಗಿ ಈಸ್ಟ್ ಟೆನ್ನೆಸಿ ಎಂಬ ಊರಿನಲ್ಲಿರುವ ಸಂಬಂಧಿಕರನ್ನು ಭೆಟ್ಟಿಯಾಗಬೇಕೆಂಬ ವಿಚಾರ ಅವಳಲ್ಲಿ ಒಮ್ಮಿಂದೊಮ್ಮೆಲೆ ಹುಟ್ಟಿಕೊಂಡಿತು. ಅದಕ್ಕಾಗಿ ಮಗನನ್ನು ಪುಸಲಾಯಿಸತೊಡಗಿದಳು. ಅವಳ ಒಬ್ಬನೇ ಮಗ ಬೇಲಿ ಪತ್ರಿಕೆಯ ಕ್ರೀಡಾಸುದ್ದಿಗಳ ಮೇಲೆ ಕಣ್ಣು ಹಾಯಿಸುತ್ತ ಕುಳಿತಿದ್ದ. ಮುದುಕಿ ಮಗನತ್ತ ಹೋಗಿ ತಾನು ಓದುತ್ತಿದ್ದ ಪೇಪರನ್ನು ಅವನ ಕಣ್ಣಿಗೆ ಹಿಡಿದು ಹೇಳಿದಳು: 'ಏಯ್ ಮಗಾ, ನೋಡಿಲ್ಲಿ, ನಾ ಹೇಳೋದು ಸುಳ್ಳು ಅಂದ್ಕೊಂಡಿಯೇನು? ಫೆಡರಲ್ ಜೈಲಿನಿಂದ ಪರಾರಿಯಾದಂಥ ಮಿಸ್‌ಫಿಟ್ ಅನ್ನೋ ಕ್ರಿಮಿನಲ್ ಫ್ಲೋರಿಡಾ ಸಿಟಿಯೊಳಗ ಅಡಗಿಕೊಂಡಾನಂತ. ಆ ನಾಲಾಯಕ್ ಇದುವರೆಗೆ ನೂರಾರು ಮಂದಿಗೆ ಮೋಸ ಮಾಡ್ಯಾನು. ಇಷ್ಟೆಲ್ಲ ಗೊತ್ತಿದ್ದೂ ನೀನು ಫ್ಲೋರಿಡಾಕ್ಕ ಹೊಂಟನಿಂತೀಯಲ್ಲ, ಇದಕ್ಕ ಏನನ್ನಬೇಕು ಹೇಳು? ನಿನ್ನ ಹೇಂತಿ, ಮಕ್ಕಳು ಮತ್ತು ತಾಯಿನ್ನ ಅಂವನ್ನ